ಮಯೂರ ವಿಶೇಷ

# ಭಾರತಿ-ಭಾರತಿ

ದೇಶದ ವಿವಿಧ ಭಾಷೆಗಳಲ್ಲಿನ ಸಾಹಿತ್ಯ ರಚನೆಯ ಒಲವು ನಿಲುವುಗಳೇನು? ಸಾಹಿತ್ಯಕ್ಕೆ ಸಂಬಂಧಿಸಿದಂತೆ ಯುವ ಬರಹಗಾರರ ತಾತ್ವಿಕತೆ ಯಾವ ಬಗೆಯದು? ಈ ಕುತೂಹಲದಲ್ಲಿ, ವಿವಿಧ ಭಾಷೆಗಳ ಏಳು ಯುವ ಲೇಖಕಿಯರನ್ನು 'ಮಯೂರ' ಮಾತನಾಡಿಸಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ 2022ರ ಸಾಲಿನ 'ಯುವ ಪುರಸ್ಕಾರ'ಕ್ಕೆ ಪಾತ್ರರಾದ 24 ಬರಹಗಾರರಲ್ಲಿ 7 ಮಂದಿ ಬರಹಗಾರ್ತಿಯರು. ಈ ಏಳೂ ಮಂದಿ 'ಮಯೂರ'ದೊಂದಿಗೆ ತಮ್ಮ ಬರವಣಿಗೆಗೆ ಸಂಬಂಧಿಸಿದ ವಿಚಾರಗಳನ್ನು ಹಂಚಿಕೊಂಡಿದ್ದಾರೆ. 'ಮಹಿಳಾ ಸಂಚಿಕೆ'ಯ ಭಾಗವಾಗಿ ನಡೆಸಲಾದ ಈ ಸಂದರ್ಶನಗಳು, ಮಹಿಳಾ ಸಾಹಿತ್ಯದ ಸಮಕಾಲೀನ ಸಂದರ್ಭವನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಟಿಪ್ಪಣಿಗಳಂತಿವೆ. ಲೇಖಕಿಯರ ತವಕ ತಲ್ಲಣಗಳು, ಅವರು ಎದುರಿಸುತ್ತಿರುವ ಸವಾಲುಗಳೊಂದಿಗೆ, ದೇಸಿ ಭಾಷೆಗಳ ಚೆಲುವು ಮತ್ತು ಅವುಗಳ ತವಕ ತಲ್ಲಣಗಳನ್ನು ಅರ್ಥ ಮಾಡಿಕೊಳ್ಳಲು ಅಗತ್ಯವಾದ ಸೂಚನೆಗಳೂ ಇಲ್ಲಿವೆ.


ನಿರ್ವಹಣೆ

**ಕೋಡಿಬೆಟ್ಟು ರಾಜಲಕ್ಷ್ಮಿ**

ಕಲೆ: ಆಶಾರಾಣಿ ನಡೋಣಿ | ರೇಖಾಚಿತ್ರಗಳು: ಜಬೀವುಲ್ಲಾ ಎಂ. ಅಸದ್


## ಯುವ ಲೇಖಕಿಯರಿಗೆ 'ಮಯೂರ' ಕೇಳಿದ ಪ್ರಶ್ನೆಗಳು

1 ಬರವಣಿಗೆ ನಿಮ್ಮ ಪಾಲಿಗೆ ಏನು? ಸಮಾಜವನ್ನು ಅರಿಯಲು ನೆರವಾಗುವ ಸೃಜನಶೀಲ ಹುಡುಕಾಟವಾ? ಸಮಾಜದ ವಿಮರ್ಶೆಗೆ ಒದಗಿಬರುವ ಸೃಜನಶೀಲ ಸಾಧನವಾ? ಅಥವಾ ಬೇರೆ ಏನು?

2 ನೀವು ಮಹಿಳೆ ಆಗಿರುವುದಕ್ಕೂ ಬರಹಗಾರ್ತಿ ಆಗಿರುವುದಕ್ಕೂ ಸಂಬಂಧ ಇದೆಯೆ? ಇದ್ದರೆ ಏನು?

3 ಲೇಖಕಿಯಾಗಿ ನಿಮ್ಮ ಹಿಂದಿನ ತಲೆಮಾರುಗಳ ಬರಹಗಾರ್ತಿಯರು ಎದುರಿಸುತ್ತಿದ್ದ ಸವಾಲುಗಳು ಹಾಗೂ ನೀವು ಎದುರಿಸುತ್ತಿರುವ ಸವಾಲುಗಳಲ್ಲಿ ವ್ಯತ್ಯಾಸ ಇದೆಯೆ? ಇದ್ದರೆ ಏನದು?

4 ಬರೆಯಲು ಮಾತೃಭಾಷೆಯನ್ನು ಆಯ್ಕೆ ಮಾಡಿಕೊಂಡಿದ್ದು ಪ್ರಜ್ಞಾಪೂರ್ವಕ ಆಯ್ಕೆಯಾ? ಇದರಿಂದ ನಿಮಗಾದ ಅನುಕೂಲಗಳೇನು? ಅನನುಕೂಲಗಳೇನು?

5 ಸಾಹಿತ್ಯಕ್ಕೆ ಸಮಾಜವನ್ನು ಪ್ರಭಾವಿಸುವ ಶಕ್ತಿ ಇದೆ ಅನ್ನಿಸುತ್ತದೆಯೆ? ನಿಮ್ಮ ಅನುಭವದ ಹಿನ್ನಲೆಯಲ್ಲಿ ವಿವರಿಸಿ.

6 ಕನ್ನಡದ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ ನಿಮಗೇನಾದರೂ ತಿಳಿದಿದೆಯೆ?

7 ನಿಮಗೆ ತಿಳಿದಂತೆ, ಇತರೆ ಭಾರತೀಯ ಭಾಷೆಗಳ ಸಾಹಿತ್ಯಕ್ಕಿಂಥ ನಿಮ್ಮ ಭಾಷೆಯ ಸಾಹಿತ್ಯ ಹೇಗೆ ಭಿನ್ನ?

8 ಸದ್ಯಕ್ಕೆ ನಿಮ್ಮ ಭಾಷಾ ಪರಿಸರದ ಸಾಹಿತ್ಯಿಕ ಸಂದರ್ಭ ಯಾವ ಬಗೆಯದು? ಬರಹಗಾರರ ಆದ್ಯತೆಗಳೇನು?